ಹೇಳಿದ್ದಾರೆ. ಈ ಕಳ್ಳಸಾಗಾಣಿಕೆಯಲ್ಲಿ ದೊಡ್ಡ ದೊಡ್ಡ ಕುಳಗಳು ಇದ್ದು ಅಧಿಕಾರಿಗಳ ಕಣ್ಣು ತಪ್ಪಿಸಿ ಅವರ ಮನೆಯಿಂದಲೇ ಚೆಕ್‌ಪೋಸ್ಟ್ ದಾಟಿ ಹೋಗುತ್ತಿದ್ದಾರೆಂದು ಸಾರ್ವಜನಿಕರು ದೂರುಗಳು ಬರುತ್ತಿದೆ. ದೊಡ್ಡ ಕುಳಗಳನ್ನು ಹಿಡಿದರೆ ೧–೨ ಲಕ್ಷ ರೂಪಾಯಿಗಳು ಬರುತ್ತದೆ. ಇದರ ಬಗ್ಗೆ ಸಚಿವರು ಏನು ಹೊಗ್ಗತೆ ತೆಗೆದುಕೊಂಡಿದ್ದಾರೆಂಬುದನ್ನು ತಿಳಿಸಬೇಕು.

ಶ್ರೀ ಜಿ. ಎಸ್. ಬಾಗಲಕೋಟೆ.—ಅಧ್ಯಕ್ಷರೆ, ಈಗಾಗಲೇ ಈ ಕಳ್ಳಸಾಗಾಣಿಕೆದಾರರನ್ನು ಪತ್ತೆ ಹಚ್ಚಲಿಕ್ಕೆ ಆ ವಿಭಾಗದಲ್ಲಿ ಎರಡು ಪ್ರತ್ಯೇಕ ಸ್ಕ್ವಾಡ್‌ಗಳನ್ನು ಇಡಲಾಗಿದೆ. ಮತ್ತು ಅಂಟಿ ಪೋಚಿಂಗಾ ವೈಡ್‌ಗಳನ್ನು ಇಡಲಾಗಿದೆ. ಇದರ ಜೊತೆಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಬಂದೂಕು, ಜೈರ್‌ಲೆಸ್ ಸೆಟ್ ಕೊಡಲಾಗಿದೆ. ವಾಹನಗಳ ವ್ಯವಸ್ಥೆಯನ್ನು ಕೂಡ ಮಾಡಿಕೊಡಲಾತ್ತಿದೆ. ಇದರ ಜೊತೆಗೆ ಸನ್ಮಾನ್ಯ ಸದಸ್ಯರು ಕೆಲವು ದೊಡ್ಡ ಕುಳಿಗಳು ಉಳಿದಿದ್ದಾರೆ ಎನ್ನುವಂಥ ಮಾತನ್ನು ಕೇಳಿದ್ದಾರೆ. ಅವರ ಬಗ್ಗೆ ಸಂಪೂರ್ಣವಾವ ವಿವರಣೆನ್ನು ಸನ್ಮಾನ್ಯ ಸದಸ್ಯರು ಕೊಟ್ಟರೆ ಆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ಆರೋಗ್ಯ ಕ್ಯಾಂಪುಗಳಿಗೆ ವಿದ್ಯುತ್ ಸರಬರಾಜು

೮೮೭ (೨೨೫೬) ಶ್ರೀ ಕೆ. ವಿ. ರವೀಂದ್ರನಾಥಬಾಬು (ಕೊಟ್ಟೂರು).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಕುಟುಂಬ ಕಲ್ಯಾಣ ಕ್ಯಾಂಪುಗಳು ಕಣ್ಣಿನ ಶಸ್ತ್ರ ಚಿಕಿತ್ಸೆ ಕ್ಯಾಂಪುಗಳಲ್ಲಿ ಪದೇ ಪದೇ ವಿದ್ಯುತ್ತಿನ ತಡೆಯಿಂದಾಗಿ ಶಸ್ತ್ರ ಚಿಕಿತ್ಸೆಗೆ ತಡೆಯಾಗುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಸರ್ಕಾರವು ಕುಟುಂಬ ಕಲ್ಯಾಣ ಕ್ಯಾಂಪು ಮತ್ತು ಕಣ್ಣಿನ ಶಸ್ತ್ರ ಚಿಕಿತ್ಸೆ ಕ್ಯಾಂಪುಗಳಿಗೆ ಅಡಚಣೆ ಇಲ್ಲದೆ ವಿದ್ಯುತ್ ಪೂರೈಸಲು ಕ್ರಮ ತೆಗೆದು ಕೊಳ್ಳುವುದೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಕುಟುಂಬ ಕಲ್ಯಾಣ ಮತ್ತು ಕಣ್ಣಿನ ಶಸ್ತ್ರ ಚಿಕಿತ್ಸೆ ಕ್ಯಾಂಪುಗಳ ಬಗ್ಗೆ ಮೊದಲೇ ವಿಷಯ ತಿಳಿಸಿದಲ್ಲಿ ಸಾಧ್ಯವಾದಷ್ಟು ಪೂರ್ಣವಾಗಿ ತಡೆಯಿಲ್ಲದ ವಿದ್ಯುತ್ ಸರಬರಾಜನ್ನು ಒದಗಿಸಲಾಗುತ್ತದೆ.

ಆ) ಇಂತಹ ಕ್ಯಾಂಪುಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ತಡೆಯಿಲ್ಲದ ವಿದ್ಯುತ್ ಸರಬರಾಜನ್ನು ಮೇಲಿನ ಉತ್ತರದಲ್ಲಿ ತಿಳಿಸಿರುವಂತೆ ಒದಗಿಸಲಾಗುತ್ತದೆ.

ಶ್ರೀ ಕೆ. ವಿ. ರವೀಂದ್ರನಾಥಬಾಬು.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಮೊದಲೇ ತಿಳಿಸಬೇಕು ಎಂದು ಹೇಳುತ್ತಾರೆ. ಈ ಪ್ರೋಗ್ರಾಮ್ ಫಿಕ್ಸ್ ಮಾಡುವ ಬಗ್ಗೆ ತಾಲ್ಲೂಕು ಲೆವೆಲ್‌ನಲ್ಲಿ ವಿಂಟಿಂಗ್ ಮಾಡುತ್ತೇವೆ, ಎಲ್ಲಾ ಆಫೀಸರ್ಸ್‌ಅನ್ನು ಕರೆಸುತ್ತೇವೆ. ಇಂತಹ ದಿನಸ ಎಂದು ಹೇಳಿ ಫಿಕ್ಸ್ ಮಾಡಿ ಆಪರೇಷನ್ ಕಂಡಕ್ಟ್ ಮಾಡಲಿಕ್ಕೆ ತಯಾರು ಮಾಡುತ್ತೇವೆ. ಮಾನ್ಯ ಸಚಿವರು ಕಂಟಿನ್ಯುಯಸ್ ಸಪ್ಲೈ ಕೊಡುತ್ತೇವೆಂದು ಹೇಳಿದರು. ನಾವು ಕೂಡ್ಲಿಗಿ ತಾಲ್ಲೂಕಿನ ಚಿಕ್ಕಜೋಗಿ ಹಳ್ಳಿಯಲ್ಲಿ ಹೋದ ತಿಂಗಳು ಇಂತಹ ಕ್ಯಾಂಪ್ ಕಂಡಕ್ಟ್ ಮಾಡಿದಾಗ ನಮಗೆ ಪವರ್ ಕನೆಕ್ಷನ್ ಕೊಡಲೇ ಇಲ್ಲ. ೪–೫ ಗಂಟೆಗೆ ಪೆಡ್ಯೂಲ್ ಪ್ರಕಾರ ಕೊಡುತ್ತೇವೆ. ಇಲ್ಲಿ ಪವರ್ ಸ್ಕೇರ್‌ಸಿಟಿ ಇರುವುದರಿಂದ ಕೊಡಲಿಕ್ಕೆ ಆಗುವುದಿಲ್ಲ ಎಂದು ಹೇಳಿ ಅಬ್ಜಕ್ಟ್ ಮಾಡಿದರು. ಇದರಿಂದಾಗಿ ಸಾಕಷ್ಟು ಪೇಷಂಟ್ಸ್ ವಾಪಸ್ಸು ಹೋದರು. ಈ ತರಹದ ತೊಂದರೆಯಾಗಿದೆ. ಇಲ್ಲಿ ನೀವು ಮಾತ್ರ ಕಂಟಿನ್ಯುಯಸ್ ಆಗಿ ವಿದ್ಯುತ್ ಕೊಡುತ್ತಾರೆ ಎಂದು ಹೇಳುತ್ತೀರಿ. ಅಲ್ಲಿ ಅಬ್ಜಕ್ಟ್ ಮಾಡಿ ಡಿಸ್‌ಕನೆಕ್ಟ್ ಮಾಡುತ್ತಾರೆ. ತಾವು ಇದರ ಪ್ರಕಾರ ಏನಾದರೂ ತೊಂದರೆ ಇದ್ದರೆ ತಿಳಿಸಿ, ಇನ್ನು ಮುಂದಕ್ಕಾದರೂ ಫ್ಯಾಮಿಲಿ ಪ್ಲಾನಿಂಗ್ ಕ್ಯಾಂಪ್ ಸುಲಭವಾಗಿ ಕಂಡಕ್ಟ್ ಮಾಡಲಿಕ್ಕೆ ಆಗುತ್ತದೆ. ಅವರು ಸಾಯಂಕಾಲ ೫–೬ ಗಂಟೆಗೆ ವಿದ್ಯುತ್ ಕೊಟ್ಟರೆ ನಮಗೆ ಕ್ಯಾಂಪ್ ಕಂಡಕ್ಟ್ ಮಾಡಲಿಕ್ಕೆ ಕಷ್ಟವಾಗುತ್ತದೆ.

ಶ್ರೀ ಜಿ. ಹೆಚ್. ಪಟೇಲ್.—ಅಧ್ಯಕ್ಷರೆ, ಇದು ನನ್ನ ಇಲಾಖೆಗೆ ಸೇರದೆ ಇದ್ದರೂ ಮಾನ್ಯ ಸದಸ್ಯರಿಗೆ ಉತ್ತರ ಹೇಳಿರುವ ಹಾಗೆ ಆ ತರಹ ಕಣ್ಣು ಶಸ್ತ್ರ ಚಿಕಿತ್ಸೆ ಕ್ಯಾಂಪುಗಳನ್ನು ಮಾಡುವಾಗ ಅಥವಾ ಯಾವುದೇ ಶಸ್ತ್ರ ಚಿಕಿತ್ಸೆ ಮಾಡುವುದು ಇರಲಿ, ವಿಶೇಷವಾಗಿ ಶಸ್ತ್ರ ಚಿಕಿತ್ಸೆ ಮಾಡತಕ್ಕ ಕ್ಯಾಂಪುಗಳಿಗೆ ಮೊದಲೇ ತಿಳಿಸಿದಲ್ಲಿ.ಇಂಟರ್‌ಪ್ಷನ್ ಇಲ್ಲದೇ ಇರತಕ್ಕಂಥ ಪವರ್ ಸಪ್ಲೈ ಮಾಡ

ಬೇಕೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಒಪ್ಪಿಕೊಳ್ಳುತ್ತೇನೆ. ಬಹುಶಃ ಅದನ್ನು ಮಾಡಲೇ ಬೇಕಾಗುತ್ತದೆ. ಇಲ್ಲದೇ ಹೋದರೆ ಅಪಾಯ ಆಗುತ್ತದೆ. ಕೆಲವುಸಾರಿ ಏನಾಗಬಹುದು ವಿದ್ಯುತ್ ಮಂಡಲಿ ನೌಕರರ ಕೈವಿೂರಿ ಹೋಗಿದ್ದರೆ, ಕೆಲವುಸಾರಿ ಮೈನ್ ಸ್ಟೇಷನ್‌ನಲ್ಲಿಯೇ ಬ್ರೇಕ್‌ಡೌನ್ ಆಗಿ ಮತ್ತೊಂದು ಆಗಿ ಆ ತರಹ ಇಂಟರ್‌ಪ್ಷನ್ ಆಗಿದ್ದರೆ ಕಷ್ಟವಾಗುತ್ತದೆ. ಅಲ್ಲಿ ಸ್ಥಳಿಯವಾಗಿ ಈ ಮಂಡಳಿ ನೌಕರರು ಏನು ಇದ್ದಾರೆ ಅವರು ಈ ಕ್ಯಾಂಪ್‌ಗಳ ಬಗ್ಗೆ ಬಹಳ ಜಾಗ್ರತೆಯಿಂದ ಇರಬೇಕೆಂದು ತಿಳಿಸುತ್ತೇನೆ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು.—ಆ ತರಹ ಇಂಟರ್‌ಪ್ಷನ್ ಇದ್ದರೆ ಒಪ್ಪಿಕೊಳ್ಳುತ್ತೇನೆ. ಆದರೆ ಅಲ್ಲಿ ಲೋಕಲ್ ಆಗಿ ಈ ರೀತಿ ಮಾಡಿದ್ದರೆ ಕಷ್ಟವಾಗುತ್ತದೆ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ, ದಯವಾಡಿ ಮಾನ್ಯ ಸದಸ್ಯರ ಕುಳಿತುಕೊಳ್ಳಬೇಕು.

ಪ್ರಶ್ನೆ ಸಂಖ್ಯೆ ೨೭೩೨
ಪ್ರಶ್ನೆ ಸಂಖ್ಯೆ ೨೪೫೦ } ಮಾನ್ಯ ಸದಸ್ಯರುಗಳು ಗೈರುಹಾಜರಾಗಿದ್ದರು.

LOSS INCURRED BY THE STATE PUBLIC UNDERTAKINGS

890 (2740) SMT. R. LEELADEVI PRASAD (Athani).—Will the Minister for Industries and Power pleased to be state :—

a) The names of the State Public Undertakings? (names of their Chairman and the Managing Directors be furnished) ;

b) Names of the State Public Undertakings incurring loss above Rs. 10 lakhs for the last three financials years ?

SRI J. H. PATEL (Minister for Industries & Power).—

a) The names of the Public Sector Undertakings along with the names of their Chairman & Managing Director are given in annexure-I.

b) The names of the State Public Undertakings which are incurring loss above Rs. 10 lakhs for the last three financial years are given below (provisional).

1. Karnatakata State Leather Industries Development Corporation.
2. Karnataka Implements & Machineries Company Ltd.,
3. Karnataka Silk Industries Corporation.
4. Karnataka Soaps & Detergents Ltd.,
5. Mysore Chrome Tanning Company Ltd.,
6. Mysore Tobacco Company Ltd.,
7. Karnataka State Road Transport Corporation.
8. Karnataka Agro Proteins Ltd.,
9. Visveswaraiah Iron & Steel Ltd.,